ಸಾಕ್ಷಿಯನ್ನು ದಿಃ 14-11-2018 ರಂದು ಪುನಃ ಕರೆಯಿಸಿ ಪ್ರಮಾಣೀಕರಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿ ನಂಃ 1 ರ ಪರ ಶ್ರೀ ಜಿ ಬಿ ಎನ್ ವಕೀಲರಿಂದಃ

1. ಪ್ರತಿವಾದಿ ನಂಃ 1 ರವರ ಪೆಟ್ರೋಲ್ ಬಂಕ ಇತ್ತು. ನಾನು ಪೆಟ್ರೋಲ್ ಡಿಸೈಲ್ ಹಾಕಿಸಲು ಹೋದಾಗ ಅವರ ಪರಿಚಯವಾಗಿರುತ್ತದೆ. ದಿಃ 08-04-2016 ರಂದು ಆಸ್ತಿಯ ಮಾರಾಟದ ಮಾತುಕತೆ ಆಯಿತು. ಮಾತುಕತೆ ಪ್ರತಿವಾದಿ ನಂಃ 1 ರವರ ಪೆಟ್ರೋಲ್ ಬಂಕನಲ್ಲಿ ಆಯಿತು. ಆ ದಿನ ನಮ್ಮೊಂದಿಗೆ ಸುರೇಶ ತಳವಾರ, ಶೇಷಪ್ಪ ಜೋಗಿನ, ಮಹೇಶ ಕಲ್ಲಾಪೂರ, ರುದ್ರಪ್ಪ ಮುಸಣ್ಣನವರ, ಬಸವರಾಜ ಗಾಣಿಗೇರ ರವರುಹಾಜರು ಇದ್ದೆವು. ದಾವಾ ಜಮೀನು ಸವದತ್ತಿ ರಸ್ತೆಯಲ್ಲಿರುತ್ತದೆ. ದಾವಾ ಆಸ್ತಿಯ ಪೂರ್ವಕ್ಕೆ ಸಾತನ್ನವರ ಜಮೀನು, ಪಶ್ಚಿಮಕ್ಕೆ ಹುಯಿಲಗೋಳ ರವರ ಜಮೀನು, ಉತ್ತರಕ್ಕೆ ಹುಯಿಲಗೋಳ ರವರ ಜಮೀನು ದಕ್ಷಿಣಕ್ಕೆ ಸಾತನ್ನವರ ರವರ ಜಮೀನು ಇರುತ್ತದೆ.

2. ನರಗುಂದ ನೀರಾವರಿ ಕಛೇರಿಯಿಂದ ಸುಮರು 5-6 ಕಿಲೋ ಮೀಟರ ದೂರದಲ್ಲಿ ದಾವಾ ಆಸ್ತಿ ಇರುತ್ತದೆ. ದಾವಾ ಆಸ್ತಿ ನೀರಾವರಿ ಜಮೀನು. ನರಗುಂದ ಗ್ರಾಮದ ದಂಡಾಪೂರ ಗ್ರಾಮದಲ್ಲಿರುವ ಜಮೀನುಗಳು ಪ್ರತಿ ಎಕರೆಗೆ 25 ಲಕ್ಷ ರೂ. ಬೆಲೆ ಇರುತ್ತದೆ ಎನ್ನುವದು ಸರಿಯಲ್ಲ. ದಿಃ 16-04-2016 ರಂದು ಪ್ರತಿವಾದಿ ನಂಃ 1 ರವರು ದಾವಾ ಆಸ್ತಿಯನ್ನು 30 ಲಕ್ಷ ರೂಪಾಯಿಗೆ ಮಾರಾಟ ಮಾಡಲು ಒಪ್ಪಿಕೊಂಡಿದ್ದರು, ನಾನು 21,40,500/- ರೂಪಾಯಿಗಳನ್ನು ಮುಂಗಡವಾಗಿ ಕೊಟ್ಟಿರುತ್ತೇನೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವದು ಸರಿಯಲ್ಲ. ದಿಃ 08-04-2016 ರಂದು ದಾವಾ ಆಸ್ತಿಯ ಮಾರಾಟದ ಮಾತುಕತೆ ಆಗಿತ್ತು ದಿಃ 16-04-2016 ರಂದು ದಾವಾ ಆಸ್ತಿ ಮಾರಾಟ ಮಾಡಲು ಪ್ರತಿವಾದಿ ನಂಃ 1 ರವರು ಖರೀದಿ ಕರಾರುಪತ್ರ

ಬರೆದುಕೊಟ್ಟಿದ್ದರು ಎಂದು ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವದು ಸರಿಯಲ್ಲ. ಕರಾರು ಪತ್ರವನ್ನು ಸ್ಟಾಂಪ ವೆಂಡರ ವಿಹೆಚ್ ಕುಲಕರ್ಣಿ ರವರ ಮನೆಯಲ್ಲಿ ಬರೆಯಿಸಿದರು. ಪ್ರತಿವಾದಿ ರವರು ಬಾಂಡ ಕಾಗದ ತಂದಿದ್ದರು, 200-00 ರೂಪಾಯಿ ಬಾಂಡ ಆಗಿತ್ತು. ಪ್ರತಿವಾದಿ ಬಾಂಡ ತಂದಿರಲಿಲ್ಲ ನಾನೇ ಪ್ರತಿವಾದಿಯ ಸಹಿಯನ್ನು ಪೊರ್ಜರಿ ಮಾಡಿ ಸಾಕ್ಷಿದಾರರೊಂದಿಗೆ ಶಾಮಿಲಾಗಿ ಖೊಟ್ಟಿ ಖರೀದಿ ಕರಾರು ಪತ್ರ ಮಾಡಿಕೊಂಡಿದ್ದೇನೆ ಎನ್ನುವದು ಸರಿಯಲ್ಲ 21 ಲಕ್ಷ ಚಿಲ್ಲರೆ ಹಣ ಮುಂಗಡವಾಗಿ ಕೊಟ್ಟಿದ್ದು ಖರೀದಿ ಕರಾರುಪತ್ರ ನೊಂದಣಿ ಯಾಕೆ ಮಾಡಿಸಿರಲಿಲ್ಲ ಎನ್ನುವ ಪ್ರಶ್ನೆಗೆ ಸಾಕ್ಷಿಯು ಬ್ಯಾಂಕಿನ ಭೋಜಾ ಇತ್ತು ಆದ್ದರಿಂದ ಅದನ್ನು ಪಾವತಿ ಮಾಡುವವರೆಗೆ ನೊಂದಣಿ ಕಾಗದ ಬೇಡಾ ಎಂದು ಮಾಡಿಸಿರಲಿಲ್ಲ ಎಂದು ಹೇಳುತ್ತಾರೆ. ಖರೀದಿ ಕರಾರು ಪತ್ರ ಬರೆದಾಗ ಶನಿವಾರ ಇತ್ತು ಪತ್ರವನ್ನು ಮಧ್ಯಾಹ್ನ 3-00 ರಿಂದ 4-00 ಗಂಟೆ ಸಮಯದಲ್ಲಿ ಬರೆಯಲಾಗಿದೆ.

3. ಪ್ರತಿವಾದಿಯ ಪೆಟ್ರೋಲ್ ಬಂಕ ನರಗುಂದ ಗ್ರಾಮದ ಜಗಾಪೂರ ರಸ್ತೆಗೆ ಇರುತ್ತದೆ. ಪ್ರತಿವಾದಿಯ ಪೆಟ್ರೋಲ್ ಬಂಕ ವ್ಯವಹಾರ ಚೆನ್ನಾಗಿ ನಡೆಯುತ್ತದೆ ಎನ್ನುವದು ನಿಜ. ಪ್ರತಿವಾದಿ ಸಿವಿಲ್ ಕಾಂಟ್ರಾಕ್ಟರ ಕೆಲಸ ಮಾಡುತ್ತಾರೆ ಎನ್ನುವದು ನಿಜ. ಪ್ರತಿವಾದಿ ಹಾಗೂ ಅವರ ಸಹೋದರರು ಖರೀದಿ ಕರಾರು ಪತ್ರ ಬರೆಯಿಸುವ ಒಂದು ವರ್ಷದ ಹಿಂದೆ ಅವರ ತಂದೆ ತೀರಿಕೊಂಡ ನಂತರದಿಂದ ಬೇರೆ ಬೇರೆ ವಾಸ ಇದ್ದಾರೆ. ಖರೀದಿ ಕರಾರು ಪತ್ರದ ವಿಷಯಗಳನ್ನು ಓದಿಕೊಂಡಿದ್ದೆ ದಾವಾ ಆಸ್ತಿ ಪ್ರತಿವಾದಿಯ ಪಿತ್ರಾರ್ಜಿತ ಆಸ್ತಿ ಎಂದು ಬರೆಯಲಾಗಿದೆ ಎನ್ನುವದು ನಿಜ. ಪ್ರತಿವಾದಿ ಹಾಗೂ ಅವರ ಸಹೋದರರ ನಡುವೆ ವಾಟ್ನಿ ಆದ ಬಗ್ಗೆ ನನಗೆ ಗೊತ್ತಿಲ್ಲ. ಆದರೆ ದಾವಾ ಆಸ್ತಿಯ ದಾಖಲೆ ಪ್ರತಿವಾದಿಯ ಹೆಸರಿನಲ್ಲಿ ಇತ್ತು. ನಿಪಿ-2 ರ ಮೇಲಲೆ ಪ್ರತಿವಾದಿಯ ಸಹಿ ಇರುವುದಿಲ್ಲ ಎನ್ನುವದು ಸರಿಯಲ್ಲ. ನಾನು ವಕೀಲರ ನೋಟಿಸು ಪ್ರತಿವಾದಿಗೆ ಕಳುಹಿಸಿದ್ದು ಅದರ ಪ್ರತ್ಯುತ್ತರ ನೋಟಿಸು ಪ್ರತಿವಾದಿ ಕೊಟ್ಟಿರುತ್ತಾರೆ ಎನ್ನುವದು ನಿಜ. ಪ್ರತಿವಾದಿ ನನಗೆ ಪ್ರತ್ಯುತ್ತರ ನೋಟಿಸು ಕಳುಹಿಸಿದ ನಂತರ ನಾನು ಅವರಿಗೆ ಉತ್ತರ ಕೊಡಲಿಲ್ಲ, ಈ ದಾವೆಯನ್ನು ಸಲ್ಲಿಸಿದ್ದೇನೆ. ನಿಪಿ-6 ದಾಖಲೆ ನಿಪಿ-2 ದಾಖಲೆ ಆದ ಒಂದು ವರ್ಷದ ನಂತರ ಬರೆದು ಕೊಡಲಾಗಿದೆ.

ನಿಪಿ-2 ಮತ್ತು ನಿಪಿ-6 ರಲ್ಲಿ ಪ್ರತಿವಾದಿಯ ಸಹಿ ಎಂದು ಸೂಚಿಸಲಾಗಿದ್ದು ಆ ಎರಡು ಸಹಿಗಳು ಬೇರೆ ಬೇರೆ ಇವೆ ಎಂದು ಸಾಕ್ಷಿಗೆ ತೋರಿಸಲಾಗಿ ಸಾಕ್ಷಿಯು ನಮ್ಮ ದಾಖಲೆಗೆ ನನ್ನ ಮುಂದೆ ಸಹಿ ಮಾಡಿದ್ದಾರೆ ನಿಪಿ-6 ರಲ್ಲಿ ಬೇರೆ ತರಹ ಮಾಡಿರಬಹುದು ಎಂದು ಎರಡು ದಾಖಲೆಯಲ್ಲಿರುವ ಸಹಿಗಳು ಬೇರೆ ಇವೆ ಎಂದು ಹೇಳುತ್ತಾರೆ. ನಿಪಿ-2 ದಾಖಲೆ ನೊಂದಣಿ ಮಾಡಬೇಕಾದರೆ ದಾಖಲೆ ಬರೆದುಕೊಡುವವರು ಹಾಜರು ಇರಬೇಕು ಅವರ ಫೋಟೋ ಸಹ ತೆಗೆಯಿಸಲಾಗುತ್ತದೆ ಎಂದು ಸದರಿ ದಾಖಲೆ ನೊಂದಣಿ ಮಾಡದೇ ಸೃಷ್ಟಿ ಮಾಡಿರುವ ದಾಖಲೆ ಆಗಿದೆ ಎನ್ನುವದು ಸರಿಯಲ್ಲ. ಕರಾರುಪತ್ರ ಮಾಡಿಕೊಳ್ಳುವ ಮುಂಚೆ ಆಸ್ತಿಯ ದಾಖಲೆ ನೋಡಿದ್ದೇನೆ. ಬ್ಯಾಂಕಿನ ಭೋಜಾ ಇತ್ತು. ನಿಪಿ-2 ರಲ್ಲಿ ಭೋಜಾ ಇರುವ ಸಾಲವನ್ನು ಮರುಪಾವತಿ ಮಾಡಿ ಖರೀದಿ ಪತ್ರ ಬರೆದುಕೊಡುತ್ತೇನೆ ಎಂದು ಬರೆಯಲಾಗಿದೆ. ನಿಪಿ-2 ರಲ್ಲಿ ಭೋಜಾ ಇರುವ ಸಾಲವನ್ನು ಮರುಪಾವತಿ ಮಾಡಿ ಖರೀದಿ ಪತ್ರ ಬರೆದುಕೊಡುತ್ತೇನೆ ಎಂದು ಬರೆದಿಲ್ಲ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವದು ಸರಿಯಲ್ಲ. ಪ್ರತಿವಾದಿ ದಾವಾ ಆಸ್ತಿಯ ದಾಖಲೆ ತಂದಿದ್ದರು. ನಿಪಿ-1 ದಾಖಲೆ ಪ್ರತಿವಾದಿ ತಂದಿದ್ದರು. ಪ್ರತಿವಾದಿಯ ಸಹೋದರರ ಸಹಿಯನ್ನು ಪಡೆದಿರಲಿಲ್ಲ, ಪ್ರತಿವಾದಿಯ ಹೆಸರಿನಲ್ಲಿ ಆಸ್ತಿ ಇದ್ದುದ್ದರಿಂದ ಪಡೆದಿಲ್ಲ ಎಂದು ಸಾಕ್ಷಿ ಹೇಳುತ್ತಾರೆ. ಪ್ರತಿವಾದಿಗೆ ಪೆಟ್ರೋಲ್ ಬಂಕ ಇದ್ದು ಅವರಿಗೆ ಸಾಕಷ್ಟು ಆದಾಯ ಇರುತ್ತದೆ ಆದ್ದರಿಂದ ಅವರಿಗೆ ಆಸ್ತಿ ಮಾರಾಟ ಮಾಡುವ ಪ್ರಮೇಯವೇ ಇರಲಿಲ್ಲ ಎನ್ನುವದು ಸರಿಯಲ್ಲ. ದಾವಾ ಆಸ್ತಿಯನ್ನು ಎತ್ತಿ ಹಾಕುವ ಉದ್ದೇಶದಿಂದ ನಿಪಿ-2 ದಾಖಲೆ ಸೃಷ್ಟಿ ಮಾಡಿದ್ದೇವೆ ಎನ್ನುವದು ಸರಿಯಲ್ಲ. 21,40,500/- ಹಣವನ್ನು ನಗದು ರೂಪದಲ್ಲಿ ಕೊಟ್ಟಿದ್ದೇನೆ. ನನ್ನ ಕಡೆ 21,40,500/- ಹಣ ಇತ್ತು ಎಂದು ಹಾಗೂ ನಾನು ಪ್ರತಿವಾದಿಗೆ ಸದರಿ ಹಣ ಕೊಟ್ಟಿದ್ದೇನೆ ಎಂದು ತೋರಿಸಲು ಬೇರೆ ದಾಖಲೆ ಇರುವುದಿಲ್ಲ. ವ್ನಾನು ಸದರಿ ಹಣವನ್ನು ಹತ್ತಿ ಬೆಳೆ ಮಾರಾಟ ಮಾಡಿ ಬಂದ ಹಣ ಕೂಡಿಟ್ಟಿದ್ದೆ ಹಾಗೂ ನನ್ನ ಸಂಬಂಧಿಕರಿಂದ ಸಾಲ ಮಾಡಿ ಪ್ರತಿವಾದಿಗೆ ಕೊಟ್ಟಿದ್ದೇನೆ. ಬೆಳೆ ಮಾರಾಟ ಮಾಡಿದ ಬಗ್ಗೆ ಹಾಗೂ ಸಾಲವನ್ನು ಪಡೆದ ಬಗ್ಗೆ ದಾಖಲೆ ಹಾಜರು ಮಾಡಿಲ್ಲ. ನಾನು ಉದ್ದೇಶಪೂರ್ವಕವಾಗಿ ಬೆಳೆ ಮಾರಾಟ ಮಾಡಿ ಹಣ ಪಡೆದಿದ್ದೆ ಹಾಗೂ ಸಾಲವನ್ನು

ಪಡೆದಿದ್ದೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವದು ಸರಿಯಲ್ಲ. 21,40,500/- ಹಣ ಸಾವಿರ ಮುಖ ಬೆಲೆಯ, ಐದುನೂರು ಮುಖಬೆಲೆಯ ಹಾಗೂ ಒಂದು ನೂರು ಮುಖ ಬೆಲೆಯ ನೋಟುಗಳಾಗಿದ್ದವು, 9 ಲಕ್ಷ ಸಾವಿರ ರೂ.ಮುಖ ಬೆಲೆಯ ನೋಟುಗಳಲ್ಲಿ ಕೊಟ್ಟಿದ್ದೇನೆ. ಒಂದು ಸಾವಿರದ ಒಂಬತ್ತು ನೂರು ನೋಟುಗಳನ್ನು ಕೊಟ್ಟಿದ್ದೇನೆ ಅದರಂತೆ 500/- ಮುಖ ಬಲೆಯ 2081 ನೋಟುಗಳನ್ನು ಕೊಟ್ಟಿದ್ದೇನೆ. ನನ್ನ ಪ್ರತಿವಾದಿಯ ನಡುವೆ ಹಣಕಾಸಿನ ವ್ಯವಹಾರ ಆಗಿಲ್ಲ ಎನ್ನುವದು ಸರಿಯಲ್ಲ. ನಾನು 1000/-, 500/- ಹಾಗೂ 100/- ಮುಖ ಬೆಲೆಯನೋಟುಗಳನ್ನು ಕೊಟ್ಟಿದ್ದೇನೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವದು ಸರಿಯಲ್ಲ. ನರಗುಂದ ಗ್ರಾಮದಲ್ಲಿ 5-6 ವರ್ಷಗಳಿಂದ ಬರಗಾಲವಿದ್ದು ಬೆಳೆ ಬೆಳೆದಿಲ್ಲ ಆದ್ದರಿಂದ ನಾನು ಬೆಳೆ ಮಾರಾಟ ಮಾಡಿ ಹಣ ಒಟ್ಟುಗೂಡಿಸಿರಲಿಲ್ಲ ಎನ್ನುವದು ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು).

ಓ ಹೇ ಕೇ ಸರಿ ಅದೆ.

ಸಹಿ -14-11-2018

ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು

ಗದಗ